K No KKNN 12 15-1-1975

in ★★★★★ 58 th Year ನೇ ವರ್ಷ

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

ಸತ್ಯವಾದಿ
SATYAVADI

Golden Jubilee Celebrated Paper
Satyavadi Daily
Mysore 4
- For Influential Publicity -

ಪ್ರಕಾಶಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬಯ್ಯ ಸಂಪಾದಕರು: ಧರ್ಮಪ್ರಚಾರಧುರೀಣ ಎಂ. ಎಸ್. ಕೃಷ್ಣರಾವ್ [3 ಪೈಸೆ

ಸಮಾಜದ್ರೋಹಿಗಳಿಗೆ ಉಗಾಂಡದಲ್ಲಿ ಮರಣದಂಡನೆ

ಮೈಸೂರು ನಗರದಲ್ಲಿ ಇಂದು

'ಬಾಂಗೋ' ಅವರಿಂದ 'ಜ್ಯೂಸಿಸ್' ಬಿಡುಗಡೆ

ಕರ್ನಾಟಕದಲ್ಲೇ ಇದೊಂದು ಪ್ರಥಮ ಪ್ರಯತ್ನ

'ಜ್ಯೂಸಿಸ್' – ಬಾಳೆ, ಸೀಬೆ, ಮುಂತಾದ ತಾಜಾ ಹಣ್ಣುಗಳಿಂದ ತಯಾರಿಸಿದ ಹಣ್ಣಿನ ಸ್ವಾದವನ್ನೇ ಹೊಂದಿರುವ ಮಧುರ ಪಾನೀಯ

ಕೇಂದ್ರ ಆಹಾರ ವಿಜ್ಞಾನ ಸಂಶೋಧನಾಲಯದ ಸಂಶೋಧನಾ ಫಲವಾದ 'ಜ್ಯೂಸಿಸ್' ಕಾರ್ಖಾನೆಯನ್ನು ಕಣ್ಣ ಕೈಗಾರಿಕೆಗಳ ರಾಜ್ಯ ಸಚಿವರಾದ ಶ್ರೀ ವೀರಪ್ಪ ಮೊಯಿಲಿ ಅವರು ಇದೀಗ ಉದ್ಘಾಟಿಸಿದ್ದಾರೆ.

ಸಿ ಎಫ್ ಟಿ ಆರ್ ಐ ಡೈರೆಕ್ಟರ್ ಡಾ|| ಬಿ ಎಲ್. ಅಮ್ಲ ಅವರ ಅಧ್ಯಕ್ಷತೆಯಲ್ಲಿ ಸಿಂಡಿಕೇಟ್ ಬ್ಯಾಂಕ್ ಅಧ್ಯಕ್ಷರಾದ ಶ್ರೀ ಕೆ. ಕೆ ಪೈ ಅವರು ಪ್ರಥಮ ಜ್ಯೂಸಿಸ್ ಅನ್ನು ಬಿಡುಗಡೆ ಮಾಡಿದ್ದಾರೆ.

ಚೈತನ್ಯ – ಉಲ್ಲಾಸ ತರುವ ಜ್ಯೂಸಿಸ್ ಇಂದಿನಿಂದ ದೊರೆಯುತ್ತದೆ

'ಬಾಂಗೋ' ಹಣ್ಣು ಸಂಸ್ಕರಣ ಕೈಗಾರಿಕೆ
28, ವಾನಂದವಾಡಿ ರಸ್ತೆ, ಮೈಸೂರು 570008
ಫೋನ್ : 21210

ad-venture

ಗರ್ಭಪಾತ ಚಿಕಿತ್ಸಾಲಯದ ಮೇಲೆ ಧಾಳಿ

ಇಟಲಿಯಲ್ಲಿ ಗರ್ಭಪಾತಕ್ಕೆ ಸಂಬಂಧವಿದೆ – ಅಲ್ಲಿಯ ರೇಡಿಕಲ್ ಪಾರ್ಟಿ ಫ್ಲೋರೆನ್ಸಿನಲ್ಲಿ ಗುಟ್ಟಾಗಿ ನಡೆಸುತ್ತಿದ್ದ ಗರ್ಭಪಾತ ಚಿಕಿತ್ಸಾಲಯದ ಮೇಲೆ ಧಾಳಿ ನಡೆಸಿ ಅಲ್ಲಿ ಈ ಕಾರ್ಯಕ್ಕೆ ಸಹಾಯಕರಾಗಿದ್ದ ಡಾಕ್ಟರ್, ನರ್ಸ್ ಸೇರಿ ೬ ಮಂದಿಯನ್ನು ವಶಕ್ಕೆ ತೆಗೆದುಕೊಂಡರು.

ಜಯಪ್ರಕಾಶರು ಮಹಾ ವ್ಯಕ್ತಿ

ಬೆಂಗಳೂರು— ಶ್ರೀ ಜಯಪ್ರಕಾಶ ನಾರಾಯಣರು ಮಹಾ ಗುರುವರೆಂದೂ, ತಾವು ಅವರನ್ನು ಕಂಡು ದೇಶದ ಪರಿಸ್ಥಿತಿ ಬಗ್ಗೆ ಚರ್ಚಿಸಲು ಯೋಚಿಸಿರುವುದಾಗಿ ಮಾಜಿ ಭಾರತಾಧ್ಯಕ್ಷ ಶ್ರೀ ಗಿರಿಯವರು ಪತ್ರಿಕೆಯವರಿಗೆ ತಿಳಿಸಿದರು

ಡೆಲ್ಲಿ ಬಂದ್

ನವದೆಹಲಿ— ತಾ|| 15 ರಂದು ಇಲ್ಲಿ ನಡೆಯುವ ಬಂದ್‌ನಲ್ಲಿ ಪತ್ರಿಕೆಗಳ, ಸಿನಿಮಾಗಳ, ಬಟ್ಟೆ ಗಿರಣಿಗಳ, ಇಂಜಿನಿರಿಂಗು ಸಾಮಗ್ರಿಗಳ, ಹೋಟೆಲುಗಳ ಕೆಲಸಗಾರರೂ, ಆಟೋರಿಕ್ಷಾ ಮತ್ತು ಟ್ಯಾಕ್ಸಿ ಡ್ರೈವರುಗಳೂ ಭಾಗವಹಿಸುವರು – ಹಲವು ಪಾರ್ಟಿಗಳು ಕರೆದಿರುವ ಈ ಬಂದ್ ಖಡ್ಡಾಯ ಶೇನಣೆ ಸ್ಥೈರ್ಯ ವಾತಾವರಣವನ್ನು ತಿಗೆ, ಬೆಲೆ ಹೆಚ್ಚೋಟಿಗೆ, ಭರಕಾರಿ ಗೌ ಶ ರ ದೊನಸ್ಸಗೆ ಅವಶ್ಯ –ತೂಲ ಕನಿಷ್ಠ ಸಂಬಳದ ಒತ್ತಾಯವಾಗಿದೆ

ಶೃಂಗೇರಿ ಜಗದ್ಗುರುಗಳವರ ನುಡಿ

ಕಡೂರು - ಭೂಸುಧಾರಣೆಯಿಂದ ಮತ್ತು ಪದ ಸಾಮಾನ್ಯ ಕಾಗ್ಯಗಳಿಗೇನೂ ತೊಂದರೆಯಾಗುವುದಿಲ್ಲವೆಂದೂ, ಆದರೆ ಭೂಸುಧಾರಣೆಯಿಂದ ಬರುವ ಆದಾಯ ಕುಗ್ಗಿದೆಯೆಂದೂ, ತಮ್ಮ ಶಿಷ್ಯರೂ ಭಕ್ತರೂ ಮತ್ತ ನಡೆಸಲೂ, ಯಾತ್ರಿಕರಿಗೆ ಆಹಾರ ಒದಗಿಸಲೂ ಸ್ವಯಂಪ್ರೇರಿತರಾಗಿ ಮುಂದೆಬಂದಿರುವರೆಂದೂ ಶ್ರೀ ಶ್ರೀ ಶೃಂಗೇರಿ ಜಗದ್ಗುರುಗಳು ಹೇಳಿರುವರು

Wanted Agents

For our Carpets, Bedsheets and Silk Sarees

Apply— J K M Textiles,
BHAVANI Post
(Via) Erode (Tamil Nadu)

ಪೋಲೀಸು ಅಧಿಕಾರಿಗಳ ಕೊಲೆ

ಷಿಲಾಂಗ್— ಸ್ವಚಲಿತ ಶಸ್ತ್ರಾಸ್ತ್ರಗಳಾದ ಮತ್ತು ಗುರ್ತಿಸಲ್ಪಡದ ಕೆಲವು ವಿಮಾಜೋಗಳು ಕೇಂದ್ರ ಪ್ರದೇಶದ ರಾಜಧಾನಿ ಐಜವ್ಲ್‌ನಲ್ಲಿ ಮೂರು ಮಂದಿ ಉನ್ನತ ಪೋಲೀಸು ಅಧಿಕಾರಿಗಳನ್ನು ಗುಂಡು ಹೊಡೆದು ಕೊಂದಿರುವರು – ಪೂರ್ತಾ ವಿಮಾಜೋಂಜಲ್ಲಿ ಕರ್ಫ್ಯೂ ಜಾರಿ ಮಾಡಲಾಗಿದೆ

●

ಇನ್ನೂ 25 ವರ್ಷಗಳು !

ಹೈದರಾಬಾದು– 2000 ದ ಇಸವಿಯ ಹೊತ್ತಿಗೆ ವಿಜ್ಞಾನಿಗಳ ಮತ್ತು ಇಂಜಿನಿಯರರ ಸಾಹಸದಿಂದ ಆಹಾರಭಾವ ನೀಗುವ ನಂಬಿಕೆಯನ್ನು ಕೇಂದ್ರ ಆಹಾರ ಮಂತ್ರಿ ಜಗಜೀವನರಾಂರವರು ಒಂದು ಸಮಾರಂಭದಲ್ಲಿ ವ್ಯಕ್ತಪಡಿಸಿದರು.

ಮರಣದಂಡನೆ ಅಪರಾಧ

ಉಗಾಂಡದಲ್ಲಿ ಅವಶ್ಯ ಪದಾರ್ಥಗಳನ್ನು ಹೆಚ್ಚು ಬೆಲೆಗೆ ಮಾರುವ, ದಾಸ್ತಾನ್ ಮಾಡುವ, ಕಳ್ಳಸಾಗಾಣಿಕೆ ಮಾಡುವ ವ್ಯಾಪಾರಿಗಳಿಗೆ ಗುಂಡುಹಾರಿಸುವ ತಂಡದಿಂದ ಮರಣಗೊಳಿಸಲಾಗುವುದು.

ಸಮಾಂತರ ಸರಕಾರ

ನವಾಡ— ಇಚ್ಲಿಗೆ ಹತ್ತಿರದ ಪೆಕೊಡಾರದಲ್ಲಿ ಸರ್ವೋದಯ ಕಾರ್ಯಕರ್ತರ ಬಂಗಿಲು ಮುಚ್ಚಿದ್ದ ಸಮ್ಮೇಳನದಲ್ಲಿ, ಜಯಪ್ರಕಾಶ ನಾರಾಯಣರು, ಗ್ರಾಮದಿಂದ ಬ್ಲಾಕ್ ಮಟ್ಟದ ವರೆಗೆ ಸಮಾಂತರ ಸರಕಾರ ಸ್ಥಾಪಿಸಲ್ಪಡಬೇಕೆಂದು ಹೇಳಿದುದಾಗಿ ಗೊತ್ತಾಗಿದೆ.

ಡಾ || ಮೋದಿ

ನೇತ್ರಹಾನಿ ಪದ್ಮಭೂಷಣ ಡಾ || ಎಂ. ಸಿ ಮೋದಿ (ಭಾರತಾಧ್ಯಕ್ಷರಿಗೆ ಗೌ || ನೇತ್ರವೈದ್ಯರು) ತಾ || 17 ರಂದು ಮಂಡ್ಯದಲ್ಲಿ ಉಚಿತ ನೇತ್ರಚಿಕಿತ್ಸಾ ಶಿಬಿರವನ್ನು ನಡೆಸುತ್ತಾರೆ.

ಭಾರತದಿಂದ ಆಕ್ರಮಣವೆ

ವಾಷಿಂಗ್ಟನ್— ಬ್ರುನಾಥ್ಯೆಸ್ಸ್ ರಾಕ್‌ಫೆಲರ್, ಸೆನೇಟಿನ ಡೆಮೊಕ್ರಾಟ್ ನಾಯಕ ಮಿಕೆ ಮ್ಯಾನ್ಸ್‌ಫೀಲ್ಡ್ ಮತ್ತು ಮಾಜಿ ಉಪ ಸ್ಟೇಟ್ ಸೆಕ್ರೆಟರಿ ರಾಬರ್ಟ್ ಸ್ಟ್ರಾಸ್ಸ್ ಯುವರನ್ನೊಳಗೊಂಡಿದ್ದ ದೊಡ್ಡ ಸ್ತರ ಆಯೋಗವು, 25 ವರ್ಷಗಳಲ್ಲಿ ಭಾರತವು ಪಾಕಿಸ್ತಾನ ಮತ್ತು ಕೆಲವು ಎಣ್ಣೆ ದೇಶಗಳ ಮೇಲೆ ಆಕ್ರಮಣ ನಡೆಸುವುದೆಂದು ಭವಿಷ್ಯ ನುಡಿದಿದೆ.

★

ಭಂಗಾರದ ನವಿಲು ಪಾರಿತೋಷಕ

ನವದೆಹಲಿ— ಇಲ್ಲಿ ನಡೆದ ಅಂತರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಅತ್ಯುತ್ತಮ ಚಿತ್ರವೆಂದು ಹಂಗೇರಿಯದ " ಡ್ರೀಮಿಂಗ್ ಯೂತ್ " ಚಿತ್ರಕ್ಕೆ ಭಂಗಾರದ ನವಿಲಿನ ಪಾರಿತೋಷಕ ದೊರೆಯಿತು.

★

200 ಮಿಲಿಯ ವರ್ಷಗಳ ಹಳೆಯ ಮರ

ಫೆಡರಾಲ್ ಜರ್ಮನ್ ರಿಪಬ್ಲಿಕ್‌ನ ಪ್ರಾಕೃತಿಯ ಐತಿಹಾಸಿಕ ವಸ್ತು ಪ್ರದರ್ಶನದಲ್ಲಿ 200 ಮಿಲಿಯ ವರ್ಷಗಳ ಹಿಂದಿನ ಮರದ ಕಾಂಡವು ಪ್ರದರ್ಶಿಸಲ್ಪಾಗಿದೆ. ಈ ಮರದ ತುಂಡು 4 ವರೆ ಮೀಟರು (15 ಅಡಿ) ಇದೆ ; ನಗರದ ಹತ್ತಿರ ನೀರಿನ ಕೊಳಾಯಿ ಹಾಕಲು ಪಾಯ ತೋಡುತ್ತಿದ್ದಾಗ ಇದು ಅಕಸ್ಮಿಕವಾಗಿ ಸಿಕ್ಕಿತು.

★

ಆಂಧ್ರ ಕಾಂಗ್ರೆಸಿಗರು

ನಾಗಾರ್ಜುನಸಾಗರ ಆಂಧ್ರಪ್ರದೇಶದಲ್ಲಿ ಕಾಣಲಾಗುತ್ತಿರುವ ಜೆ ಪಿ ರೀತಿ ಚಳವಳಿಯನ್ನು ನೋಳಕೆಯಲ್ಲೇ ಸುಟ್ಟು ಹಾಕಲು ಪ್ರತಿಚಳವಳಿಹೂಡಲು ಆಂಧ್ರದ ಎಲ್ಲಾ ಕಾಂಗ್ರೆಸಿಗರೂ ಒಮ್ಮತಹೊಂದಿದ್ದಾರೆ.

ವುಡ್‌ಲಾಂಡ್ 17 1 75 ರಿಂದ

ಅವೋಘ ಆರಂಭ

ಗೂ ಂ ಜ್ ದಿ ಎಖೊ

ಅಪೂರ್ವ ಭೂಜಿ ಕಲರ್ ಹಿಂದಿ ಕಲಾಕೃತಿ

ದಿನ ೫ ಪ್ರದರ್ಶನಗಳು

ಅ ಪೆ ರಾ 17 I 75 ರಿಂದ

ನ್ಪ ಯ ಂ ವ ರ

ಅನೋಘ ಕನ್ನಡ ಚಿತ್ರ

ದಿನ 3 ಪ್ರದರ್ಶನಗಳು

S H A K T I

S U D H A

A S per Tonic

Help The Gorakshana

—HumanitarianPropoganda Monthly....

Protect the Cow

Quality Printing NeatBinding

Lakshminarasimha Press

Sivarampet, Mysore 1

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ



Contribute Liberally

to the National Defence Fund

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram Mysore